ದಿನಾಂಕ.04-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ

**16**. ಮುಖ್ಯ ಕಚೇರಿ ಸೇರಿ ಪಿರ್ಯಾದಿ ಸಹಕಾರಿಯ 8 ಬ್ರಾಂಚ್ ಗಳು ಇವೆ. ಅಂಕೋಲಾ ತಾಲುಕಿನಲ್ಲಿ ಬೆಳಂಬರ, ಬಾಸಗೋಡ , ಅಂಕೋಲಾ, ಅವರ್ಸಾ , ಅಲಗೇರಿ ಬ್ರಾಂಚ್ ಗಳು ಇವೆ. ಬ್ರಾಂಚ್ ಗಳ ನಡುವೆ ಇಷ್ಟು ಅಂತರ ಇರಬೇಕು ಎಂದು ನಿಯಮ ಇಲ್ಲ. ಸಂಬಂಧಪಟ್ಟ ಬ್ರಾಂಚ್ ಗೆ ಜಿಲ್ಲಾದ್ಯಂತ ಜೊಯಿಡಾ ತಾಲುಕು ಹೊರತು ಪಡಿಸಿ, ಕಾರ್ಯ ವ್ಯಾಪ್ತಿ ಇರುತ್ತದೆ. ಪಿರ್ಯಾದಿ ಸಹಕಾರಿಯ ಬ್ರಾಂಚ್ ನಿಂದ ಬೇರೆ ತಾಲೂಕಿನ ವ್ಯಕ್ತಿಗಳಿಗೂ ಸಾಲ ಕೊಡಬಹುದು. ಬೇರೆ ತಾಲೂಕಿನ ವ್ಯಕ್ತಿಗಳಿಗೆ ಸಾಲ ಕೊಡಲು ಬೇರೆ ಹೆಚ್ಚುವರಿ ನಿಯಮ ಇರುವುದಿಲ್ಲ. ಸ್ಥಳೀಯ ವಕ್ತಿಯ ವ್ಯವಹಾರ ಇರುವುದರಿಂದ ಆ ವ್ಯಕ್ತಿಯ ಮಾಹಿತಿ ನಮಗೆ ಇರುತ್ತದೆ ಎಂದರೆ ಸರಿ. ಬೇರೆ ತಾಲೂಕಿನ ವ್ಯಕ್ತಿಯ ಮಾಹಿತಿ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಬೇರೆ ತಾಲೂಕಿನ ವ್ಯಕ್ತಿಯ ಹಣಕಾಸಿನ ಸ್ಥಿತಿಗತಿಯನ್ನು ನಾವು ತಿಳಿದುಕೊಳ್ಳಬೇಕು ಎಂದರೆ ಸರಿ. ಅಂತಹ ವ್ಯಕ್ತಿಗಳ ಆರ್ಥಿಕ ಸ್ಥಿತಿಯನ್ನು ಆ ಪ್ರದೇಶದ ಹಣಕಾಸು ಸಂಸ್ಥೆಗಳಿಂದ ದಾಖಲೆ ಪಡೆದು ತಿಳಿದುಕೊಳ್ಳಬೇಕು ಎಂದರೆ ಸರಿ. ಹಾಗಾಗಿ ಅಂತಹ ವ್ಯಕ್ತಿಗೆ NO dues certificate ಹಣಕಾಸು ಸಂಸ್ಥೆಗಳಿಂದ ಪಡೆದು ಹಾಜರು ಪಡಿಸಿ ಎಂದು ಹೇಳುತ್ತೇವೆ ಎಂದರೆ ಸಾಕ್ಷಿ ಹಿಂದೆ ಹೇಳುತ್ತಿರಲಿಲ್ಲ, ಈಗ ಹೇಳುತ್ತಿದ್ದೇವೆ ಎಂದು ನುಡಿಯುತ್ತಾರೆ.

**17.** ಈ ದಿನ ನಾನು ಹೇಳುತ್ತಿರುವ ಸಾಕ್ಷಿಯು ಬಾಸಗೋಡ ಶಾಖೆಗೆ ಸಂಬಂದಪಟ್ಟದ್ದು. ಬಾಸಗೋಡ ಶಾಖೆಯಲ್ಲಿ ಆರೋಪಿ ಯಾವಾಗ ಖಾತೆಯನ್ನು ತೆರೆದರು ಎಂದು ನನಗೆ ಗೊತ್ತಿಲ್ಲ. ಖಾತೆ ತೆರೆದ ಎಷ್ಟು ದಿನದ ನಂತರ ಸಾಲಕ್ಕೆ ಆರೋಪಿ ಅರ್ಜಿ ಕೊಟ್ಟರು ಎಂದು ನೆನಪಿಲ್ಲ. ಖಾತೆ ತೆರೆದ ನಂತರ ಎಷ್ಟು ಸಮಯ ವ್ಯವಹಾರ ಮಾಡಿ ಸಾಲ ಪಡೆಯಲು ಅರ್ಜಿ ಹಾಕಬೇಕು ಎಂದರೆ ಸಾಕ್ಷಿ ಆ ರೀತಿ ನಿಯಮ ಇಲ್ಲ. ಸಾಲಕ್ಕೆ

ಅರ್ಜಿ ಹಾಕಿದಾಗ ಆಡಳಿತ ಮಂಡಳಿಯಲ್ಲಿ ನಿರ್ಧಾರವಾಗಬೇಕು ಎಂದು ನುಡಿಯುತ್ತಾರೆ. ಸಾಲದ ದಾಖಲಾತಿಗಳಲ್ಲಿ ಸಾಲ ಪಡೆದುಕೊಂಡವರು ಯಾವ ರೀತಿ ವ್ಯವಹಾರ ಮಾಡಿದ್ದಾರೆ ನಮೂದು ಮಾಡಬೇಕು ಎಂದರೆ ಸಾಕ್ಷಿ ಮಾಡುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಸಾಲಗಾರನ ವ್ಯವಹಾರದ ಬಗ್ಗೆ ನಮೂದು ಮಾಡಿಲ್ಲ. ನಿಪಿ-7 ರಲ್ಲಿ e-stamp bond 100 ಎಂದು ಬರೆದು ನಂತರ 2 ಚೆಕ್ ಎಂದು ಬರೆದು ಅದರ ಮೇಲೆ ತಿದ್ದುಪಡಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ತಿದ್ದುಪಡಿ ಯಾಗಿರುವುದು 2 ಜಾಮೀನು ಎಂದು ಬರೆಯುವ ಬಾಬ್ತು ಇರುತ್ತದೆ. ನಿಪಿ-7 ನ್ನು ನಮ್ಮ ಬ್ಯಾಂಕಿನಲ್ಲಿ ಆರೋಪಿಯ ಎದುರಿನಲ್ಲಿ ನಮ್ಮ ಸಹಕಾರಿಯ ಸಿಬ್ಬಂದಿ ಬರೆದಿರುತ್ತಾರೆ. ಅದು ಯಾರು ಎಂದು ಗೊತ್ತಿಲ್ಲ. ನಿಪಿ-7 ರಲ್ಲಿ ಅರೋಪಿ ಯ ವಾರ್ಷಿಕ ಆದಾಯ ವ್ಯಾಪಾರದ ಮೂಲದಿಂದ ರೂ. 90,000/- ಎಂದು ಬರೆಯಲು ಯಾವ ದಾಖಲೆ ಪರಿಶೀಲಿಸಿದ್ದೀರಿ ಎಂದರೆ ಸಾಕ್ಷಿ ಆರೋಪಿ ಹೇಳಿದಂತೆ ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯಿಂದ ಜಮೀನಿನ ದಾಖಲೆ ಪಡೆಯುವ ಪ್ರಯತ್ನ ಮಾಡಿಲ್ಲ. ನಿಪಿ-7 ರ ನಾಲ್ಕನೆ ಪುಟದಲ್ಲಿ e-stamp bond 100 ಅದ ನಂತರ ಕೆಳಗಡೆ ಬರೆದಿರುವುದನ್ನು ಬಿಳಿ ಬಣ್ಣದಿಂದ ಅಳಿಸಿದೆ ಎಂದರೆ ಸರಿ. ಆ ರೀತಿ ಬಿಳಿ ಬಣ್ಣದಿಂದ ಅಳಿಸಿದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ತಿದ್ದುಪಡಿಯಾದಲ್ಲಿ ಚಿಕ್ಕ ಸಹಿ ಮಾಡಬೇಕು ಎಂದರೆ ಸಾಕ್ಷಿ ಮಾಡಬೇಕು ಎಂದು ಹೇಳಿ, ನಂತರ ಮಾಡಲು ಬಹುದು , ಮಾಡದೆ ಇರಲೂ ಬಹುದು ಎಂದು ನುಡಿಯುತ್ತಾರೆ. ಯಾರು ತಿದ್ದುಪಡಿ ಮಾಡಿದ್ದಾರೆ ಎಂಬುದನ್ನು ಖಾತ್ರಿ ಪಡಿಸಲು ಆ ತಿದ್ದುಪಡಿ ಮಾಡಿದವರು ಸಹಿ ಮಾಡಬೇಕಾಗಿರುವುದು ಎಂದರೆ ಸಾಕ್ಷಿ ಮಾಡಬಹುದು, ಮಾಡದೆ ಇರಲೂ ಬಹುದು ಎಂದು ನುಡಿಯುತ್ತಾರೆ.

18. ಸಾಲದ ಅರ್ಜಿಯನ್ನು ನೋಡಿ ಯಾವ ದಿನಾಂಕದ ಆಡಳಿತ ಮಂಡಳಿಯ ಸಭೆಯಲ್ಲಿ ಮಂಜೂರಿ ಆಯಿತು ಎಂದು ಹೇಳಬಹುದಾ ಎಂದರೆ ಸಾಕ್ಷಿ ಸಾಲದ ಅರ್ಜಿಯಲ್ಲಿ ಆಡಳಿತ ಮಂಡಳಿ ಸಭೆಯ ದಿನಾಂಕ ಹೇಳಿರುವುದಿಲ್ಲ ಹಾಗೂ ಠರಾವಿನಲ್ಲಿ ಮಾತ್ರ ದಿನಾಂಕ ಹೇಳಿರುತ್ತದೆ ಎಂದು ನುಡಿಯುತ್ತಾರೆ. ಆಡಳಿತ ಮಂಡಳಿಯ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಸಾಕ್ಷಿಗೆ ನಿಪಿ-7 ರ ನಾಲ್ಕನೆ ಪುಟದಲ್ಲಿ ಆಡಳಿತ ಮಂಡಳಿಯ ನಿರ್ಣಯದ ಕಾಲಂ ನಲ್ಲಿ ಇರುವುದನ್ನು ತೋರಿಸಿದಾಗ ಸಾಕ್ಷಿ ದಿಃ

20-07-2015 ರ ಸಭೆಯಲ್ಲಿ ನಿರ್ಣಯವಾಗಿರುವುದು ಎಂದು ನುಡಿಯುತ್ತಾರೆ. ಆಡಳಿತ ಮಂಡಳಿಯ ಸಭೆ ತಿಂಗಳಿಗೆ ಒಂದು ಅಥವಾ ಎರಡು ಬಾರಿ ನಡೆಯುತ್ತದೆ. ಸಾಲದ ಅರ್ಜಿ ಕೊಟ್ಟ ನಂತರ ಎಷ್ಟು ದಿನಕ್ಕೆ ಆಡಳಿತ ಮಂಡಳಿ ಸಭೆ ನಡೆಯುತ್ತದೆ ಎಂದರೆ ಸಾಕ್ಷಿ ಅರ್ಜಿ ಕೊಟ್ಟ ನಂತರ ಯಾವಾಗ ಸಭೆ ಇರುತ್ತದೆ ಆ ಸಭೆಯಲ್ಲಿ ಅರ್ಜಿ ಇಡುತ್ತೇವೆ ಎಂದು ನುಡಿಯುತ್ತಾರೆ. ಸಾಲದ ಅರ್ಜಿಯ ಜೊತೆಗೆ ಆಧಾರ ಕಾರ್ಡ್ ಹಾಗೂ ಪೊಟೋ , ಪಾನ್ ಕಾರ್ಡ್ ಮತ್ತು ಅವರ ಮಾಹಿತಿ ಇರುವ ದಾಖಲೆಯನ್ನು ಸಭೆಯಲ್ಲಿ ಇಡುತ್ತೇವೆ. ಆರೋಪಿಯ ಸಾಲದ ಅರ್ಜಿಯ ಜೊತೆ ಆಧಾರ ಕಾರ್ಡ್ ಹಾಗೂ ಪೊಟೋ ಹಾಗೂ ಪಾನ್ ಕಾರ್ಡ್ ಸಭೆಯಲ್ಲಿ ಇಡಲಾಗಿದೆ.

**19**. ಸಾಲದ ಖಾತೆಯ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಆ ಸ್ಟೇಟ್ ಮೆಂಟನ್ನು ಹಾಜರು ಪಡಿಸಿದರೆ ಎಷ್ಟು ಸಾಲ ನೀಡಲಾಗಿದೆ, ಎಷ್ಟು ಹಣ ತುಂಬಿದ್ದಾರೆ , ಚೆಕ್ ನೀಡಿದ ಸಮಯಕ್ಕೆ ಎಷ್ಟು ಹಣ ಬಾಕಿ ಇತ್ತು ಹಾಗೂ ಎಲ್ಐಸಿ ಪ್ರೀಮಿಯಮ್ ತುಂಬಿದ್ದಾರೆ ಎಂಬ ಮಾಹಿತಿ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಅದರಲ್ಲಿ ಪಡೆದ ಸಾಲ ಹಾಗೂ ತುಂಬಿದ ಹಣ ಮಾತ್ರ ಗೊತ್ತಾಗುತ್ತದೆ, ಉಳಿದ ವಿಚಾರ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಲದ ದಾಖಲಾತಿಗಳಲ್ಲಿ ಎಲ್ಐಸಿ ಬಾಂಡ್ ನಮೂದಿಸಲಾಗಿದೆ ಎಂದರೆ ಸರಿ. ಎಲ್ಐಸಿ ಬಾಂಡ್ ಸಾಲದ ಜಾಮೀನುದಾರರ ಬಾಂಡ್ ಆಗಿರುತ್ತದೆ. ಎಲ್ಐಸಿ ಬಾಂಡ್ ನ್ನು ಭದ್ರತೆ ಪಡೆದುಕೊಳ್ಳಬೇಕಾದರೆ ಅದನ್ನು assign ಮಾಡಿಸಿಕೊಳ್ಳಬೇಕು ಎಂದರೆ ಸರಿ . ಈ ಕೇಸ್ ನ ದಾಖಲೆಗಳಲ್ಲಿ ಹೇಳಿರುವ ಎಲ್ಐಸಿ ಬಾಂಡ್ ನ್ನು assign ಮಾಡಿಸಿಕೊಂಡಿದ್ದೇವೆ. ಆ ರೀತಿ assign ಮಾಡಿಸಿಕೊಂಡ ನಂತರ ಪಿರ್ಯಾದಿ ಸಹಕಾರಿಗೆ ಅದರ ಮೇಲೆ ಸಂಪೂರ್ಣ ಜಬಾಬ್ದಾರಿ ಎಂದರೆ ಸಾಕ್ಷಿ ಸಂಪೂರ್ಣ ಜವಾಬ್ದಾರಿ ಇಲ್ಲ ಹಾಗೂ ಪ್ರೀಮಿಯಮ್ ವನ್ನು ನಾವು ತುಂಬುವುದಿಲ್ಲ ಎಂದು ನುಡಿಯುತ್ತಾರೆ. assign ಮಾಡಿಸಿಕೊಳ್ಳುವ ಉದ್ದೇಶ ಸಾಲದ ಭದ್ರತೆ. ಆ ಬಾಂಡ್ ನ ಪ್ರಿಮಿಯಮ್ ವನ್ನು ತುಂಬಲು ಅವರಿಗೆ ನಾವೆ ನೆನಪು ಮಾಡಿಕೊಡಬೇಕು ಎಂದರೆ ಸಾಕ್ಷಿ ಸಿಕ್ಕಿದಾಗಲೆಲ್ಲಾ ಅವರಿಗೆ ನೆನಪು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಆ ಎಲ್ಐಸಿ ಬಾಂಡ್ ಯಾವ ಸ್ವರೂಪದ್ದು ಎಂದು ನನಗೆ ಹೇಳಲಾಗುವುದಿಲ್ಲ.

20. ಆರೋಪಿ 2 ಸಾಲಗಳನ್ನು ಪಿರ್ಯಾದಿ ಸಹಕಾರಿಯಿಂದ ಪಡೆದಿದ್ದಾರೆ. ಇನ್ನೊಂದು ಸಾಲ ಪ್ರಧಾನ ಕಚೇರಿ ಅಲಗೇರಿ ಇಂದ ಪಡೆದಿದ್ದಾರೆ. ಆ ಸಾಲ ಯಾವ ದಿನಾಂಕದಂದು ಪಡೆದದ್ದು ಎಂದು ನೆನಪಿಲ್ಲ. ಎಷ್ಟು ಸಾಲ ಎಂದು ಗೊತ್ತಿಲ್ಲ. ಯಾವ ದಿನಾಂಕದಂದು ಮತ್ತು ಎಷ್ಟು ಹಣಕ್ಕೆ ಆ ಸಾಲಕ್ಕೆ ಚೆಕ್ ಕೊಟ್ಟದ್ದು ಎಂದು ಹೇಳಬಹುದಾ ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. ಅದಕ್ಕೆ ಯಾರು ಜಾಮೀನುದಾರರು ಎಂದು ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. ಆ ಸಾಲಕ್ಕೆ ಮುಂಚೆ ಆರೋಪಿಯ ಬೇರೆ ಸಾಲ ಇತ್ತಾ ಎಂದು ಗೊತ್ತಿಲ್ಲ. ಆ ಸಾಲ ಯಾವ ಉದ್ದೇಶಕ್ಕಾಗಿ ಪಡೆದಿದ್ದಾರೆ ಎಂದು ಗೊತ್ತಿಲ್ಲ.

21. ಈ ದಿನ ಪಾಟೀ ಸವಾಲಿಗೆ ಈ ಪ್ರಕರಣ ಇದ್ದದ್ದು ನನಗೆ ಗೊತ್ತಿತ್ತು. ಈ ಪ್ರಕರಣದ ಸಾಲಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳು ನಮ್ಮ ಕಚೇರಿಯಲ್ಲಿದೆ ಎಂದರೆ ಸಾಕ್ಷಿ ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಮೂಲ ದಾಖಲಾತಿ ಹಾಜರು ಪಡಿಸುವಾಗ ಅದರ ಜೆರಾಕ್ಸ ಪ್ರತಿಯನ್ನು ಇಟ್ಟು ಕೊಂಡಿಲ್ಲವೆ ಎಂದರೆ ಸಾಕ್ಷಿ ಡೈರಿಯಲ್ಲಿ ಬರೆದಿಟ್ಟು ಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಜೆರಾಕ್ಸ ಪ್ರತಿಗಳನ್ನು ಇಟ್ಟುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಜೆರಾಕ್ಸ ಪ್ರತಿಗಳನ್ನು ನೋಡಿಕೊಂಡು ಬಂದರೆ ಗೊತ್ತಿಲ್ಲ, ನೆನಪಿಲ್ಲ ಮುಂತಾದ ಉತ್ತರ ಕೊಡುವುದನ್ನು ತಪ್ಪಿಸಬಹುದು ಎಂದರೆ ಸಾಕ್ಷಿ ಈ ದಿನ ಇದ್ದ ಕೇಸ್ ಗಳನ್ನು ನೋಡಿಕೊಂಡು ಬಂದಿರುತ್ತೇವೆ ಹಾಗು ಬಹಳಷ್ಟು ಕೇಸ್ ಗಳು ಇರುತ್ತವೆ ಎಂದು ನುಡಿಯುತ್ತಾರೆ.

22. ಅಲಗೇರಿ ಕಚೇರಿಯ ಸಾಲಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳ ಜೆರಾಕ್ಸ ಪ್ರತಿಗಳು ಕಚೇರಿಯಲ್ಲಿ ಇರುತ್ತವೆ ಎಂದರೆ ಸರಿ. ಆ ಜೆರಾಕ್ಸ ಪ್ರತಿಗಳನ್ನು ನೋಡಿ ಕೊಂಡು ಬಂದರೆ ಗೊತ್ತಿಲ್ಲ , ನೆನಪಿಲ್ಲ ಎಂದು ಉತ್ತರ ಕೊಡುವ ಸಂದರ್ಭ ಇರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆಯ ಮೇರೆಗ ಮುಂದುಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.